ವಿಷಯ : ಮೈಸೂರು ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ಸರಿಯಾಗಿ ಕೆಲಸ ನಿರ್ವಹಿಸದಿರುವುದು.

1430(2016)-ಶ್ರೀ ಟಿ. ಬಿ. ಜಯಚಂದ್ರ (ಕಳ್ಳಬೆಳ್ಳ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಆಶ್ರಯ ಶಾಲೆಯಲ್ಲಿ ನಿವೃತ್ತಿ ಹೊಂದಲು ಇನ್ನು ಒಂದು ವರ್ಷವಿರುವ ಉಪಾಧ್ಯಾಯರ ಸೇವಾ ಪುಸ್ತಕದಲ್ಲಿ ನಮೂದಿಸಬೇಕಾಗಿರುವ ವಿಷಯಗಳನ್ನು ನಮೂದಿಸದೇ ಇರಲು ಕಾರಣವೇನು ?

ಆ) ಸೇವಾ ಪುಸ್ತಕದಲ್ಲಿ ಎಂಟ್ರಿ ಮಾಡದೆ ಅವರಿಗೆ 20 ವರ್ಷಗಳಿಂತ ಕಾಲವೇತನ ಬಡ್ತಿ, ವೇತನ ಬಡ್ತಿ ಹಾಗೂ ಸ್ಟ್ಯಾಗ್‌ನೇಷನ್ ಇನ್‌ಕ್ರಿಮೆಂಟ್ ಇವುಗಳನ್ನು ಮಂಜೂರು ಮಾಡದೆ ಕಿರುಕುಳ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದರೂ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಇ) ತೊಂದರೆ ಕೊಡುತ್ತಿರುವ ಇಂತಹ ಅಧಿಕಾರಿ ನೌಕರರ ಮೇಲೆ ಸರ್ಕಾರ ಏನು ಕ್ರಮ ಕೈಗೊಳ್ಳಲಾಗಿದೆ ?

ಈ) ಎಷ್ಟು ದಿನಗಳೊಳಗೆ ಅವರುಗಳಿಗೆ ವೇತನ ಬಡ್ತಿ, ಕಾಲವೇತನ ಬಡ್ತಿ ಇನ್‌ಕ್ರಿಮೆಂಟ್ ಇವುಗಳನ್ನು ಮಂಜೂರು ಮಾಡಲು ಕ್ರಮ ತೆಗೆದುಕೊಳ್ಳಲೂ ಆಗುವುದು ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ ಸಮಾಜ ಕಲ್ಯಾಣ ಸಚಿವರು

ಅ) ಮೈಸೂರು ತಾಲ್ಲೂಕಿನಲ್ಲಿ ಯಾವುದೇ ಆಶ್ರಯ ಶಾಲೆಯಿರುವುದಿಲ್ಲ. ಆದರೆ 2 ವಸತಿ ಶಾಲೆಗಳು ಮೈಸೂರು ನಗರದ ಗಾಂಧಿನಗರ ಹಾಗೂ ಉದಯಗಿರಿ (ಶಾಂತಿನಗರ)ಯಲ್ಲಿ ಮಾತ್ರ ಇವೆ. ಆದರೂ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಮೈಸೂರು ಮತ್ತು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಮೈಸೂರು ಇವರುಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿ ಇಂತಹ ಪ್ರಕರಣಗಳಲ್ಲಿ ಕೂಡಲೇ ಎಲ್ಲಾ ಸೇವಾ ಪುಸ್ತಕಗಳಲ್ಲಿ ಸೇವಾ ಮಾಹಿತಯನ್ನು ಶೀಘ್ರವಾಗಿ ನಮೂದಿಸಲು ಸೂಚಿಸಲಾಗಿದೆ.

ಆ) ಇಂತಹ ಯಾವುದೇ ಪ್ರಕರಣಗಳೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ-

ಈ) ಎಲ್ಲಾ ನೌಕರರುಗಳಿಗೆ ಕಾಲಕಾಲಕ್ಕೆ ನಿಯಮಾನುಸಾರ ಶೀಘ್ರವಾಗಿ ವೇತನಬಡ್ತಿ, ಕಾಲವೇತನ ಬಡ್ತಿ, ಸ್ಟ್ಯಾಗ್ನೇಷನ್ ಇನ್‌ಕ್ರಿಮೆಂಟ್ ಇವುಗಳನ್ನು ಮಂಜೂರು ಮಾಡಿ ಸಂಬಂಧಪಟ್ಟ ನೌಕರರುಗಳ ಸೇವಾ ಪುಸ್ತಕದಲ್ಲಿ ವಿಳಂಬ ಮಾಡದೆ ನಮೂದಿಸಲು ಸಂಬಂಧಪಟ್ಟದಲ್ಲಿ ವಿಳಂಬ ಮಾಡದೆ ನಮೂದಿಸಲು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ನೌಕರರುಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ವಿಷಯ : ರಾಜ್ಯದಲ್ಲಿರುವ ಸಣ್ಣ ಪ್ರಮಾಣ ಕೈಗಾರಿಕೆಗಳು

1432 (1959)-ಡಾ॥ ಎಂ. ಪಿ. ಕರ್ಕಿ (ಕುಮಟಾ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1) ರಾಜ್ಯದಲ್ಲಿ ಸಣ್ಣ ಪ್ರಮಾಣ ಕೈಗಾರಿಕೆಗೆ ಯಾವ ಪ್ರಮಾಣದಲ್ಲಿ ಸಹಾಯಧನ ವಿತರಿಸಲಾಗುವುದು?

2) ಈ ಸಹಾಯಧನ ನೀಡುವಿಕೆಗೆ ಗಡುವು ನಿರ್ಧರಿಸಲಾಗಿದೆಯೆ?

3) ಈ ವಿಳಂಬದಿಂದಾಗಿ ಅನೇಕ ಉದ್ದಿಮೆಗಳು ರೋಗಗ್ರಸ್ಥವಾಗುವುದು ನಿಜವಲ್ಲವೆ?

ಶ್ರೀ ಬಿ. ಎ. ಮೋಯ್ದೀನ್ (ಸಣ್ಣ ಕೈಗಾರಿಕಾ ಸಚಿವರು)

1) ರಾಜ್ಯ ಸರ್ಕಾರದ ಹೊಸ ಕೈಗಾರಿಕಾ ನೀತಿ 1996- 2001ರನ್ವಯ ಕೈಗಾರಿಕಾ ಅಭಿವೃದ್ಧಿ ಸ್ಥಾನಮಾನದ ಆಧಾರದ ಮೇಲೆ ರಾಜ್ಯವನ್ನು ಮೂರು ವಲಯಗಳನ್ನಾಗಿ ವಿಂಗಡಿಸಲಾಗಿದ್ದು, ಅದರ ವಿವರಗಳನ್ನು ಕೆಳಗೆ ನೀಡಲಾಗಿದೆ.

ವಲಯ -1 ಅಭಿವೃದ್ಧಿ ಹೊಂದಿದ ಪ್ರದೇಶಗಳು (ಬೆಂಗಳೂರು ನಗರ (ಉತ್ತರ ದಕ್ಷಿಣ ತಾಲ್ಲೂಕು ಹಾಗೂ ಬೆಂಗಳೂರು ನಗರ ಅಗ್ಲೋಮರೇಷನ್ ಪ್ರದೇಶ)

ವಲಯ-2 ಅಭಿವೃದ್ಧಿ ಹೊಂದುತ್ತಿರುವ ಪ್ರದೇಶ-173 ತಾಲ್ಲೂಕುಗಳು

ವಲಯ-3 ಕೈಗಾರಿಕಾ ಬೆಳವಣಿಗೆ ಕೇಂದ್ರ (ಹಾಸನ ಧಾರವಾಡ ರಾಯಚೂರು ಹಾಗೂ ಉಳಿದ ಕಿರು ವಿಕಾಸ ಕೇಂದ್ರಗಳು)

ಸಣ್ಣ ಕೈಗಾರಿಕಾ ವಲಯ-2 ಮತ್ತು ವಲಯ-3ರಲ್ಲಿ ಸ್ಥಾಪಿಸಲ್ಪಟ್ಟ ಕೈಗಾರಿಕಾ ಘಟಕಗಳಿಗೆ ರಾಜ್ಯ ಬಂಡವಾಳ ಹೂಡಿಕೆ ಸಹಾಯದನವನ್ನು ಅನುಕ್ರಮವಾಗಿ ಶೇಕಡ 25 ಮತ್ತು ಶೇಕಡ 30 ರಂತೆ ಸ್ಥಿರಾಸ್ತಿ ಮೇಲೆ ಹೂಡಿದ ಬಂಡವಾಳಕ್ಕೆ ನೀಡಲಾಗುತ್ತಿದ್ದು ಇದನ್ನು ರೂ. 25.00 ಲಕ್ಷ ಹಾಗೂ ರೂ.30.00 ಲಕ್ಷಗಳಿಗೆ ಅನುಕ್ರಮವಾಗಿ